Publication : Prajavani
Date : Friday, December 07, 2007
Edition : Bangalore
Page : 15
Headline : Map My India

# ಪ್ರಯಾಣಕ್ಕೆ ನೆರವಾಗುವ 'ನ್ಯಾವಿಗೇಟರ್'

**ಪ್ರಜಾವಾಣಿ ವಾರ್ತೆ**




ಬೆಂಗಳೂರು: ಕಾರು ಪ್ರಯಾಣಿಕರಿಗೆ ಹೆದ್ದಾರಿ ಮತ್ತು ನಗರಗಳ ರಸ್ತೆಗಳ ನಕ್ಷೆಯ ಸಮಗ್ರ ಪರಿಚಯ ನೀಡುವ, ತೆರಳಬೇಕಾದ ಸ್ಥಳದ ಬಗ್ಗೆ ಉಪಗ್ರಹ ನೆರವಿನಿಂದ ಸುಲಲಿತವಾಗಿ ಮಾರ್ಗದರ್ಶನ ಮಾಡುವ ಪುಟ್ಟ ಸಾಧನ 'ನ್ಯಾವಿಗೇಟರ್' ಅನ್ನು ಮ್ಯಾಪ್ ಮೈ ಇಂಡಿಯಾ ಪರಿಚಯಿಸಿದೆ.

ಉಪಗ್ರಹ ಸಂಪರ್ಕ ಹೊಂದಿರುವ 3.5 ಇಂಚುಗಳ ಬಣ್ಣದ ಪರದೆಯ ಬೆರಳ ಸ್ಪರ್ಶದಿಂದಲೇ ಅಗತ್ಯ ಮಾಹಿತಿ ಪಡೆಯುವ ಈ ಪುಟ್ಟ ಸಾಧನವು ಬಹುಪಯೋಗಿಯಾಗಿದೆ. ಚಾಲಕನ ಮುಂಭಾಗದಲ್ಲಿ ಜೋಡಿಸಿ ಅಗತ್ಯ ಮಾಹಿತಿಯನ್ನು ಬೆರಳ ಸ್ಪರ್ಶದಿಂದಲೇ ವೀಕ್ಷಿಸಲು ಸಾಧ್ಯ. ಜತೆಗೆ ಧ್ವನಿ ಮೂಲಕ ಮಾರ್ಗದರ್ಶನವನ್ನೂ ನೀಡಲಿದೆ. ಹಿಂಬದಿಯ ಸೀಟಿನಲ್ಲಿ ಕುಳಿತವರು ಈ ಸಾಧನ ಕೈಯಲ್ಲಿ ಹಿಡಿದುಕೊಂಡೇ ಅಗತ್ಯವಾದ ಮಾಹಿತಿ ಪಡೆಯುತ್ತ ಚಾಲಕನಿಗೆ ನಿರ್ದೇಶನ ನೀಡಬಹುದಾಗಿದೆ. ಸಂಗೀತ ಆಲಿಸುವ, ಚಿತ್ರ ವೀಕ್ಷಿಸುವ ಸೌಲಭ್ಯವೂ ಇದರಲ್ಲಿ ಇದೆ ಎಂದು ಮ್ಯಾಪ್‌ಮೈಇಂಡಿಯಾದ ಮಾರುಕಟ್ಟೆ ಮುಖ್ಯಸ್ಥ ರೋಹನ್ ವರ್ಮಾ ಅವರು ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಿ.ಇ ಇನ್ಫೊ ಸಿಸ್ಟಮ್ ಅಭಿವೃದ್ಧಿಪಡಿಸಿರುವ ಮ್ಯಾಪ್‌ಮೈಇಂಡಿಯಾದ ನಿಖರವಾದ ಭೂಪಟ ಈ ನ್ಯಾವಿಗೇಟರ್‌ನ ಬೆನ್ನೆಲುಬು ಆಗಿದೆ. ನ್ಯಾವಿಗೇಟರ್‌ನಲ್ಲಿ ಇರುವ ಪುಟ್ಟ ಬಿಲ್ಲೆಯಲ್ಲಿ ಅಡಕವಾಗಿರುವ ಇಡೀ ದೇಶದ ರಸ್ತೆ ನಕ್ಷೆ ಮತ್ತು ವಿವಿಧ ಸ್ಥಳಗಳ ವಿವರಗಳಲ್ಲಿ ಚಾಲಕನಿಗೆ ಬೇಕಾದ ಮಾಹಿತಿಯು ಉಪಗ್ರಹದ ನೆರವಿನಿಂದ ಪರದೆ ಮೇಲೆ ಮೂಡುತ್ತದೆ. ವಾಹನ ಯಾವ ತಾಣದಲ್ಲಿ ಇದೆ ಎನ್ನುವುದನ್ನೂ ಈ ಸಾಧನ ತಿಳಿಸುತ್ತದೆ. ಎಟಿಎಂ, ಆಸ್ಪತ್ರೆ, ಪೆಟ್ರೋಲ್ ಬಂಕ್ ಮತ್ತಿತರ ಸೇವಾ ಘಟಕಗಳು ಎಲ್ಲಿವೆ ಎನ್ನುವುದನ್ನೂ ಚಾಲಕರು ತಿಳಿದುಕೊಳ್ಳಬಹುದು. ಆದರೆ ರಸ್ತೆಯಲ್ಲಿ ವಾಹನ ದಟ್ಟಣೆ ಉಂಟಾಗಿ ಸಂಚಾರಕ್ಕೆ ಅಡ್ಡಿಯಾಗಿರುವುದನ್ನು ತಕ್ಷಣಕ್ಕೆ ತಿಳಿದುಕೊಳ್ಳುವ ಸೌಲಭ್ಯ ಸದ್ಯಕ್ಕೆ ಲಭ್ಯ ಇಲ್ಲ. ಮುಂದಿನ ಐದಾರು ತಿಂಗಳಲ್ಲಿ ಈ ಸೌಲಭ್ಯವನ್ನೂ ಒದಗಿಸಲಾಗುವುದು ಎಂದು ರೋಹನ್ ನುಡಿದರು.

ಈ ಸೇವೆಯನ್ನು ಮೊಬೈಲ್, ಇಂಟರ್‌ನೆಟ್‌ನಲ್ಲಿಯೂ ಒದಗಿಸಲಾಗುತ್ತಿದೆ. ಮೊಬೈಲ್‌ನಲ್ಲಿ ಮಾಸಿಕ ಶುಲ್ಕ ರೂ 400 ಪಾವತಿಸಬೇಕಾಗುತ್ತದೆ. ಮೂರು ತಿಂಗಳ ಹಿಂದೆ ನವದೆಹಲಿಯಲ್ಲಿ ಚಾಲ್ತಿಗೆ ತರಲಾಗಿರುವ ಈ ಸೇವೆಗೆ ಉತ್ತಮ ಉತ್ತೇಜನ ದೊರೆತಿದೆ. ಬೆಂಗಳೂರಿನಲ್ಲಿಯೂ ಈ ಉತ್ಪನ್ನ ಲಭ್ಯ ಇದೆ.

ಈ ಸಾಧನದ ಬೆಲೆ ರೂ 22 ಸಾವಿರ. ಆರು ತಿಂಗಳಿಗೊಮ್ಮೆ ಮಾಹಿತಿ ನವೀಕರಿಸಲಾಗುತ್ತಿದೆ. ಇದಕ್ಕೆ ರೂ 1500 ಪಾವತಿಸಬೇಕಾಗುತ್ತದೆ. ಈ ವೆಚ್ಚ ಬಿಟ್ಟರೆ ಮಾಸಿಕ ಶುಲ್ಕವೇನೂ ವಿಧಿಸಲಾಗುವುದಿಲ್ಲ ಎಂದರು.